ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದಹಾಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನ ಕಾರ್ಯದರ್ಶಿಯವರು ಹೇಳಿದ್ದು ಉಳಿದ ಹಣವನ್ನು ಸರಂಡರ್ ಮಾಡಿಯೆಂದು. ಇವರು ಎರಡನೆಯ ಸಾರಿ ಮೀಟಿಂಗ್ ಸೇರಿದಾಗ ಅವರನ್ನು ಕರೆಯದೆ ಈ ರೀತಿ ತೀರ್ಮಾನ ತೆಗೆದುಕೊಂಡರು. ಅದರ ಬಗ್ಗೆ ನಮಗೆ ಹೇಳಬೇಕು.

ಅಧ್ಯಕ್ಷರು : ಸುರೇಶ್ ಕುಮಾರ್‌ರವರು ಬಹಳ ಖಚಿತವಾಗಿ ಹೇಳಿದ್ದಾರೆ. 17ನೇ ತಾರೀಖು ಏನು ತೀರ್ಮಾನವಾಯಿತು, 26ನೇ ತಾರೀಖು ಆಮೇಲೆ 30ನೇ ತಾರೀಖು ರಾತ್ರಿ ಕುಳಿತು ಅವರು ಕಂಟ್ರಾಕ್ಟ್ ಫೈನಲೈಸ್ ಮಾಡಿದ್ದಾರೆ.31ನೇ ತಾರೀಖು ಇಡೀ ಹಣವನ್ನು ಖರ್ಚುಮಾಡಿ ಟ್ರಜರಿಗೆ ಬಿಲ್ ಸಬ್‌ಮಿಟ್ ಮಾಡಿದ್ದಾರೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಅದಕ್ಕೆ ಉತ್ತರ ಕೊಡತಕ್ಕ ವೇಳೆಯಲ್ಲಿ ಆರೋಪವನ್ನು ತಳ್ಳಿಹಾಕಿ ನಾವು ಎಲ್ಲಾ ಬೇಡಿಕೆಗಳನ್ನು ಆದರಿಸಿ ಎಲ್ಲಾ ನಿಯಮಗಳನ್ನು ಅನುಸರಿಸಿ ಹಣವನ್ನು ಖರ್ಚು ಮಾಡಿದ್ದೇವೆ. ಹಣವನ್ನು ಖರ್ಚುಮಾಡಿಲ್ಲವೆನ್ನುವ ಮಾತನ್ನು ಅವರು ಹೇಳುತ್ತಿಲ್ಲ. ಎಲ್ಲಾ ನಿಯಮಗಳನ್ನು ಅನುಸರಿಸಿ ಮಾಡಿದ್ದೇವೆಂದು ಹೇಳಿದ್ದಾರೆ. ತಮ್ಮ ಹತ್ತಿರ ಹೆಚ್ಚಿನ ಪುರಾವೆಗಳಿದ್ದರೆ ತೆಗೆದುಕೊಂಡು ಬಂದು ತಮ್ಮ ಆರೋಪವನ್ನು ಸಮರ್ಥಿಸಿಕೊಳ್ಳಿ ತಮಗೆ ಅವಕಾಶ ಕೊಡುತ್ತೇನೆ. ನಂತರ ಸರ್ಕಾರ ಏನು ಉತ್ತರ ಕೊಡುತ್ತದೆ ಅದನ್ನು ನೋಡಿಕೊಂಡು we will decide as to what should be done.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಡಿಬೇಟ್ ಸಮಯದಲ್ಲಿ ನಾನು ಪೂರ್ತಿ ದಾಖಲೆಗಳನ್ನು ತಮ್ಮ ಮುಂದಿಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಕೂಡ ಪ್ರಾಣಿಗಳ ಹೆಸರಿನಲ್ಲಿ ಅಧಿಕಾರಿಗಳು ತಿನ್ನುವುದನ್ನೂ ಕಂಡುಹಿಡಿದು ಅವರಿಗೆ ಶಿಕ್ಷೆ ಕೊಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಆಗಬಹುದು.

ಮಂಗಳೂರು ಜಿಲ್ಲಾ ಪಂಚಾಯಿತಿಯ ಹಿಂದಿನ ಅಧ್ಯಕ್ಷರು ಆಡಳಿತ ಜನತಾದಳದವರಾಗಿದ್ದು ಬಹುಮತ ಇಲ್ಲದಿದ್ದರೂ ಅಧ್ಯಕ್ಷರಾಗಿ ಮುಂದುವರೆಯುತ್ತಿರುವುದು.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಹಿಂದಿನ ದಕ್ಷಿಣ ಕನ್ನಡ ಜಿಲ್ಲೆ ವಿಭಜನೆಗೊಂಡು ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಾಗಿ ವಿಂಗಡಣೆಯಾಗಿದ್ದು ಜಿಲ್ಲಾ ಪಂಚಾಯಿತಿ ಕೂಡ ವಿಭಜನೆಗೊಂಡಿದೆ. ಉಡುಪಿ ಜಿಲ್ಲೆ ಅಸ್ತಿತ್ವಕ್ಕೆ ಬಂದು ಹೊಸದಾಗಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಯ್ಕೆಯ ಪ್ರಕ್ರಿಯೆ ಕೂಡ ಮುಗಿದಿರುತ್ತದೆ. ಆದರೆ ಮಂಗಳೂರು ಜಿಲ್ಲಾ ಪಂಚಾಯಿತಿಯ ಹಿಂದಿನ ಅಧ್ಯಕ್ಷರರು ಆಡಳಿತ ಜನತಾಪಕ್ಷದವರಾಗಿದ್ದು ಬಹುಮತ ಇಲ್ಲದಿದ್ದರೂ ಕೂಡ ಅಧ್ಯಕ್ಷರಾಗಿ ಮುಂದುವರಿಯುತ್ತಿದ್ದಾರೆ. ಅಲ್ಲಿ ಪಕ್ಷಗಳ ಬಲಾಬಲ ಈ ರೀತಿ ಇದೆ. ಭಾರತೀಯ ಜನತಾ ಪಕ್ಷ-20, ಜನತಾದಳ-10, ಕಾಂಗ್ರೆಸ-2 ಮತ್ತು ಸಿಪಿಎಂ-2 ಸ್ಥಾನಗಳನ್ನು ಹೊಂದಿದ್ದು ಅವಿಶ್ವಾಸ ಠರಾವನ್ನು ಅಧ್ಯಕ್ಷರ ವಿರುದ್ಧ ನೀಡಿದ್ದರೂ ಕೂಡ ಅಧ್ಯಕ್ಷರು ಆ ಬಗ್ಗೆ ಯಾವುದೇ ಸಭೆ ಕರೆಯದೆ ಆಡಳಿತ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿದ್ದಾರೆ. ತಕ್ಷಣ ಸರ್ಕಾರ ಅವರನ್ನು ವಜಾಮಾಡಿ ಕೂಡಲೇ

ಪ್ರಜಾಪ್ರಭುತ್ವ ತಳಹದಿಯ ಮೇಲೆ ಆಡಳಿತ ನಡೆಸುವಂತೆ ಬಹುಮತವುಳ್ಳ ಅಧ್ಯಕ್ಷರನ್ನು ಆಯ್ಕೆ ಮಾಡಲು ಸರ್ಕಾರ ಸೂಕ್ತ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಂದು ಮಾರಕ ಹೊಡೆತ ಆಗುತ್ತದೆ. ಅಧಿಕಾರ ಸ್ಥಾನದಲ್ಲಿ ಮುಂದುವರಿಯುವಂತಹ ಪ್ರಯತ್ನ ಅಲ್ಲಿ ನಡೆಯುತ್ತಿದೆ. ಸರ್ಕಾರ ಮಧ್ಯಪ್ರವೇಶ ಮಾಡಬೇಕು ಮತ್ತು ಕೂಡಲೇ ಅಧ್ಯಕ್ಷರ ಚುನಾವಣೆ ಮಾಡಬೇಕು ಎಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೊಸದಾಗಿ ರಚನೆಯಾಗಿರುವ ಜಿಲ್ಲಾ ಪಂಚಾಯಿತಿಗಳಲ್ಲಿ ಪಕ್ಷಗಳ ಬಲಾಬಲ ಬದಲಾವಣೆಯಾಗಿದೆ. ಇಂತಹ ವಿಚಾರಗಳಲ್ಲಿ ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ನಿಯಮಾವಳಿ ಪ್ರಕಾರವಾಗಿ ಅದನ್ನು ಚರ್ಚೆ ಮಾಡಬೇಕಾಗಿರತಕ್ಕದ್ದು ಅಲ್ಲಿಯ ಸದಸ್ಯರ ಕರ್ತವ್ಯ. ನನಗೆ ತಿಳಿದುಬಂದ ಮಾಹಿತಿ ಪ್ರಕಾರ ಅಧ್ಯಕ್ಷರ ಮತ್ತು ಉಪಾಧ್ಯಕ್ಷರಿಗೆ ಒಂದೇ ಸಲ ಗೊತ್ತುವಳಿ ಕೊಟ್ಟಿದ್ದಾರೆ. ಕೆಲವು ತಾಂತ್ರಿಕದೋಷಗಳಿವೆ ಎಂದು ಗೊತ್ತಾಗಿದೆ. ಆದರೆ ಇಲ್ಲಿ ಇಷ್ಟು ಮಾತ್ರ ಹೇಳುತ್ತೇನೆ, ಈ ತಾಂತ್ರಿಕ ವಿಚಾರಗಳ ಮೂಲಕ ಒಬ್ಬರು ಬಹುಮತ ಇಲ್ಲದೆ ಇರತಕ್ಕ ಸಂದರ್ಭದಲ್ಲಿ ಅಧ್ಯಕ್ಷರಾಗಿ ಉಳಿದುಕೊಳ್ಳತಕ್ಕದ್ದು ಸರಿಯಾದುದಲ್ಲ. ಅವರು ವಿವೇಚನೆಯ ಮೂಲಕ ಪ್ರಜಾಪ್ರಭುತ್ವಕ್ಕನುಗುಣವಾಗಿ ಬಹುಮತವಿಲ್ಲದೆ ಇದ್ದಾಗ ರಾಜೀನಾಮೆ ಕೂಡುವುದು ಸೂಕ್ತವೆಂದು ಭಾವಿಸಿಕೊಳ್ಳುತ್ತೇನೆ.

ಬಂಟ್ವಾಳ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಕೊರತೆ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಅಧ್ಯಕ್ಷರೆ, ಬಂಟ್ವಾಳ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಕೊರತೆಯಿಂದಾಗಿ ಹೆಚ್ಚು ಅವ್ಯವಸ್ಥೆ ಇದ್ದು ಇದರಿಂದ ಎಲ್ಲಾ ಗ್ರಾಹಕರಿಗೆ ಕಷ್ಟನಷ್ಟ ಅನುಭವಿಸುವ ಸ್ಥಿತಿ ಬಂದಿದೆ. ಅದನ್ನು ಪರಿಹಾರಿಸಿಕೊಳ್ಳುವ ದೃಷ್ಟಿಯಿಂದ ತುಂಬೆಯಲ್ಲಿರುವ 33 ಕೆವಿ ವಿದ್ಯುತ್ ಸಬ್ ಸ್ಟೇಶನ್ ಮೇಲ್ದರ್ಜೆಗೇರಿಸುವ ಕೆಲಸ ಕೂಡ ಆಗುತ್ತಿದೆ. ಆ ಕೆಲಸ ಪ್ರಾರಂಭವಾಗುವ ಸಂದರ್ಭದಲ್ಲಿ ಅಲ್ಲಿ ಲೈನ್ ಎಳೆಯುವ ಜಾಗದಲ್ಲಿ ಅಲ್ಲಿ 38ಕ್ಕೆ ಟವರ್ಸ್‌ನ ಅವಶ್ಯಕತೆಯಿದೆ. ಈ ಟವರ್ಸ್ ಆಗುವಂತಹ ಕೆಲವು ಪ್ರದೇಶಗಳಲ್ಲಿ ಖಾಸಗಿ ವ್ಯಕ್ತಿಗಳು ವಿರೋಧ ಮಾಡಿದ ಕಾರಣ ಆ ಕೆಲಸ ಇವತ್ತು ಸ್ಥಗಿತವಾಗಿದೆ. ಇದರಿಂದಾಗಿ ಇದರ ಪೂರ್ತ ಕಾಮಗಾರಿ ಕೆಲಸ ಸ್ಥಗಿತವಾದ ಕಾರಣ ವಿದ್ಯುತ್ ಪೂರೈಕೆ ಕೆಲಸ ಮಾಡಲಿಕ್ಕೆ ಆಗಲಿಲ್ಲ. ಇದರಿಂದ ತುಂಬಾ ಜನರಿಗೆ ತೊಂದರೆಯಾಗಿದೆ. ತಕ್ಷಣ ಏನೆಲ್ಲಾ ಸಮಸ್ಯೆಯಿದೆ ಅದನ್ನು ಪರಿಹಾರ ಮಾಡಿ. ಏಕೆಂದರೆ ಲೈನ್ ಎಳೆಯುವ ಪ್ರದೇಶ ಮತ್ತು ಟವರ್ ಮಾಡುವ ಪ್ರದೇಶದಲ್ಲಿ ಅಮೂಲ್ಯವಾದ ಜಮೀನು ಇದೆ. ಅದಕ್ಕೆ ಪರಿಹಾರ ಕೊಟ್ಟು ಸಮಸ್ಯೆಯನ್ನು ಪರಿಹಾರ ಮಾಡಿ ಕೆಲಸ ಪ್ರಾರಂಭ ಮಾಡಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ಖಾತೆ ಸಚಿವರು) : ಮಾನ್ಯ ಸದಸ್ಯರು ಹೇಳಿದಹಾಗೆ ಬಂಟ್ವಾಳ ತಾಲ್ಲೂಕಿನ ಬಿ.ಸಿ. ರಸ್ತೆಯಲ್ಲಿರುವ 33ಕೆವಿ ಸಬ್‌ಸ್ಟೇಶನ್ ಅನ್ನು 110ಕೆವಿ ಸಬ್ ಸ್ಟೇಶನ್‌ಗೆ ಮೇಲ್ದರ್ಜೆಗೇರಿಸುವ ಕಾಮಗಾರಿ ಕೆಲಸ ಪ್ರಗತಿಯಲ್ಲಿದೆ. ಸದರಿ ಸಬ್‌ಸ್ಟೇಶನ್ ನಿರ್ಮಾಣದ 110ಕೆವಿ